**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂ:51/2016**

**ಸಿಡಬ್ಲ್ಯೂ:27 ಪಿ ಡಬ್ಲ್ಯೂ:11**

**ಹೆಸರು:** ಲಕ್ಷ್ಮವ್ವ ಭಜಂತ್ರಿ

**ಗಂಡನ ಹೆಸರು:** ಅಶೋಕ

**ವಯಸ್ಸು:** 40 ವರ್ಷಗಳು.

**ಉದ್ಯೋಗ:** ಗೃಹಣಿ

**ವಾಸ ಸ್ಥಳ:** ಬೂದಿಹಾಳ.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು: ದಿ: 28.11.2024.**

**ಮುಖ್ಯ ವಿಚಾರಣೆ: ಮಾನ್ಯ ಸಸಅ ರವರಿಂದ:**

ಚಾಸಾ:1 ರಿಂದ 10, 13, 14, 15, 19, 20 ರಿಂದ 36 ರವರು ನನಗೆ ಗೊತ್ತಿಲ್ಲ. ಚಾಸಾ:12 ಮತ್ತು 16 ರಿಂದ 18 ನನಗೆ ಪರಿಚಯ ಇದ್ದಾರೆ. ನ್ಯಾಯಾಲಯದ ಮುಂದೆ ಇರುವ 1, 2 ಮತ್ತು 4 ನೇ ಆರೋಪಿಗಳು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಈ ದಿನ 5 ನೇ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸಸಅ ರವರಿಂದ:**

1. 2009-2010 ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು

ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡಿಸುವುದು ಗೊತ್ತಿರುತ್ತದೆ. ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಇಬ್ಬರು ಹಿರೇಬೂದಿಹಾಳ ನೆಲಗುಡ್ಡ ಭೂಕೋಪ್ಪ ರಸ್ತೆ ಸುಧಾರಣಾ ಕೂಲಿ ಕೆಲಸಕ್ಕೆ ಕೂಲಿಯಂತೆ ಹೋಗಿದ್ದೇವು ಎಂದರೆ ಸರಿಯಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರ ಕೆಲಸ ಮಾಡಿದ ಹಾಜರಾತಿ ಪಟ್ಟಿಯನ್ನು ನೋಡಲಾಗಿ ಅದರಲ್ಲಿ ಸಂಃ61426 ಇದ್ದು, ಹಿರೇಬೂದಿಹಾಳದಿಂದ ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿರುವ ಬಗ್ಗೆ ಕೂಲಿ ಕೆಲಸಗಾರರ ಪಟ್ಟಿಯಲ್ಲಿ ಕೆಲಸ ಮಾಡಿದ ಬಗ್ಗೆ ಅ.ನಂಃ136 ಕ್ಕೆ ನನ್ನ ಹೆಸರು ಮತ್ತು ಅ.ನಂಃ137 ಕ್ಕೆ ನನ್ನ ಗಂಡನ ಹೆಸರು ಅದರ ಮುಂದೆ ಜಾಬ್ ಕಾರ್ಡ ನಂಃ212 ಅಂತ ಬರೆದು ನನ್ನ ಮತ್ತು ನನ್ನ ಗಂಡನ ಹೆಸರಿನ ಮುಂದೆ ಕೂಲಿ ಹಣ 700/ ತೋರಿಸಿದ್ದು ಮತ್ತು ಅದು ನಮಗೆ ಮುಟ್ಟಿದೆ ಅಂತ ಅದರ ಮುಂದೆ ಕನ್ನಡದಲ್ಲಿ ಸಹಿ ಮಾಡಿದ್ದು, ಅದರ ಮುಂದೆ ಎರಡು ಜನರ ಹೆಸರು ಮುಂದೆ ರೂ 1400/ ರೂಪಾಯಿ ನಮಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ಮುಖಾಂತರ ನನ್ನ ಹಾಗೂ ಇನ್ನುಳಿದ 15 ಜನರ ಹೆಸರುಗಳ ಖಾತೆಗಳಿಗೆ ಚೆಕ್ಕ ನಂಃ172559 ದಿಃ24.02.2010 ಮೊತ್ತ 1,53,944/ ರೂಪಾಯಿ ಇದ್ದು ಈ ಹಣವನ್ನು ಜಮಾ ಮಾಡಬೇಕು ಅಂತ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ನೋಡಿದ್ದು ಅದರಲ್ಲಿ ಅ.ನಂಃ2 ಕ್ಕೆ ನನ್ನ ಹೆಸರು ನಮೂದಿಸಿ ಹೆಸರಿನ ಮುಂದೆ ನನ್ನ ಬ್ಯಾಂಕ ಉಳಿತಾಯ ಖಾತೆ ನಂಬರ ನಮೂದಿಸಿ ರೂಪಾಯ 10,304/ ಜಮಾ ಮಾಡಲು ಬರೆಯುವುದಾಗಿ ಅಧ್ಯಕ್ಷರಾದ ಆರೋಪಿ ನೀಲವ್ವ ಭದ್ರಾಪುರ ಹಾಗೂ ಎಮ್ ಎ ನದಾಫ ಇವರುಗಳ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಂತರ ನನ್ನ ಮತ್ತು ನನ್ನ ಗಂಡ ಇವರ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಬೇರೆ ಕೂಲಿಕಾರರ ಕೂಲಿ ಹಣವನ್ನು ಜಮಾ ಮಾಡಲಾಗಿ ನಮ್ಮ ಬಾಬ್ತು ಕೂಲಿ ಹಣ 10,304/ ಹಣವನ್ನು ಕಾರ್ಯದರ್ಶಿಯವರಿಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಕೂಲಿಕಾರ ಪಟ್ಟಿ ನಂಃ61958 ಇದರಲ್ಲಿ ಅ.ನಂಃ101 ಕ್ಕೆ ನನ್ನ ಹೆಸರನ್ನು ನಮೂದಿಸಿ ಜಾಬ್ ಕಾರ್ಡ ಮತ್ತು 212 ಅಂತ ಬರೆದು ನನ್ನ ಹೆಸರಿನ ಮುಂದೆ 700 ರೂಪಾಯಿ ಕೊಟ್ಟರಂತೆ ನಮೂದಿಸಿ ಅದಕ್ಕೆ ನನ್ನ ಸಹಿ ಕೊಟ್ಟಂತೆ ಖೊಟ್ಟಿ ಸಹಿ ಮಾಡಲಾಗಿದೆ ಎಂದರೆ

ಸರಿಯಲ್ಲ. ಚೆಕ್ಕ ನಂಃ172567 ದಿಃ03.04.2010 ಮೊತ್ತ 1,08,150/ಇದ್ದು, ಪೆಯಿಜ್ ಲಿಸ್ಟನಲ್ಲಿ ನನ್ನ ಹೆಸರನ್ನು ಅ.ನಂಃ6 ಕ್ಕೆ ನನ್ನ ಖಾತೆ ನಂಬರ ನಮೂದಿಸಿ ನನ್ನ ಹೆಸರಿನ ಮುಂದೆ ರೂ 10,950/ ಜಮಾ ತೆಗೆದುಕೊಳ್ಳಲಾಗಿದೆ ಅಂತ ಬರೆಯಲಾಗಿದ್ದು. ದಿಃ06.04.2010 ರಂದು ಜಮೆ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರ ಇನ್ನೊಂದು ಕೂಲಿಕಾರರ ಹಾಜರಾತಿ ಪಟ್ಟಿಯಲ್ಲಿ ನಂಬರಃ62627 ಅಂತ ಇದ್ದು, ಅದರಲ್ಲಿ ನನ್ನ ಹೆಸರಾಗಲೀ ನನ್ನ ಗಂಡನ ಹೇಸರಾಗಲೀ ನಮೂದಿಸಿರುವುದಿಲ್ಲ ಮತ್ತು ಬ್ಯಾಂಕಿನ ಖಾತೆಗಳಿಗೆ ಜಮಾ ಮಾಡಲು ಚೆಕ್ಕ ನಂಃ172568 ದಿಃ03.04.2010 ಮೊತ್ತ 1,08,150/ ಇದ್ದು, ಪೆಯಿಜ್ ಲಿಸ್ಟನಲ್ಲಿ ನನ್ನ ಹೆಸರನ್ನು ಅ.ನಂಃ6 ಕ್ಕೆ ಬರೆದು ನನ್ನ ಖಾತೆ ನಂಬರ ನಮೂದಿಸಿ ರೂ 10,800/ ಜಮಾ ತೆಗೆದುಕೊಳ್ಳಲಾಗಿದೆ ಎಂದು ಬರೆದು, ದಿಃ06.04.2010 ರಲ್ಲಿ ಜಮೆ ಆಗಿರುತ್ತದೆ ಎಂದರೆ ಸರಿಯಲ್ಲ. ಒಟ್ಟು ಮೊತ್ತ 21,750/ ಗಳನ್ನು ದಿಃ06.04.2010 ರಂದು ಕಾರ್ಯದರ್ಶಿಯವರ ಕಡೆಗೆ ನಮ್ಮ ಬ್ಯಾಂಕನಿಂದ ಕೂಲಿಕಾರರ ಹಣವನ್ನು ಹೇಳಿ ನಮ್ಮಿಂದ ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿವರೆಗೆ ಶಾಲೆ ಕಲಿತಿದ್ದು ನನ್ನ ಸಹಿಯನ್ನು ನಾನು ಇಂಗ್ಲೀಷನಲ್ಲಿ ಮಾಡಿರುತ್ತೇನೆ, ನನ್ನ ಗಂಡ ಧಾರವಾಡ ಎಸ್ ಡಿ ಎಮ್ ಆಸ್ಪತ್ರೆಯಲ್ಲಿ ಕೆಲಸ ಮಾಡುತಿದ್ದು ಅವರು ಸಹ ವಿದ್ಯಾವಂತರಾಗಿದ್ದು ಹಾಗೂ ಇಂಗ್ಲೀಷನಲ್ಲಿ ಸಹಿ ಮಾಡುತ್ತಾರೆ, ನಾನಾಗಲೀ ನನ್ನ ಗಂಡ ಆಗಲೀ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೂಲಿಕಾರ್ಮಿಕರ ಕೂಲಿ ಆಳುಗಳು ಆಗಿ ಕೆಲಸ ಮಾಡುತಿದ್ದೇವು ಎಂದರೆ ಸರಿಯಲ್ಲ. ನಮ್ಮ ಉಳಿತಾಯ ಖಾತೆಯಿಂದ ಒಟ್ಟು 32,050/ ಹಣವನ್ನು ನಮ್ಮಿಂದ ಕಾರ್ಯದರ್ಶಿಯಾದ ನದಾಫ, ಅಧ್ಯಕ್ಷರು ನೀಲವ್ವ ಭದ್ರಾಪುರ ಮತ್ತು ಆಡಳಿತ ಅಧಿಕಾರಿ ಎ ಆರ್ ಕುಲಕರ್ಣಿ ಪಂಚಾಯತ ಕ್ಲರ್ಕ ಶಂಕ್ರಪ್ಪ ಸಂಗಣ್ಣನವರ ಇವರು ಎಲ್ಲರೂ ಮೀಲಾಪೆಯಾಗಿ ಕೂಲಿಕಾರ ಹಣವನ್ನು ತಮ್ಮ ಸ್ವಂತಕ್ಕೆ ದುರ್ಬಳಕ್ಕೆ ಮಾಡಿಕೊಂಡು ಸರಕಾರಕ್ಕೆ ಮತ್ತು ಕೂಲಿಕಾರ್ಮಿಕರಿಗೆ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 10,304/ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ

ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ18 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**